ಶ್ರೀ ಎಂ. ವೀರಪ್ಪಮೊಯಿಲಿ:– ಅದೂ ಆಗಲೀ ಬೇಡವೆಂದು ಹೇಳುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ತಾವು ಇರಲಿಲ್ಲ ಬೆಳಿಗ್ಗೆ ಬಹಳ ಚರ್ಚೆಯಾಗಿದೆ.

ಶ್ರೀ ಸಿ. ಬೈರೇಗೌಡ:– ಈಗ ಅಡ್ಜರ್ನ್ ಮಾಡಿ ಇನ್ನೊಂದು ದಿವಸ ಸೇರಿ ಚರ್ಚೆ ಮಾಡೋಣ. ತೊಂದರೆ ಏನೂ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ:– ಈ ಸದನ 12ಕ್ಕೆ ಮುಗಿಯಬೇಕಿತ್ತು. ಆದರೂ ಎಲ್ಲಾ ವಿಚಾರಗಳನ್ನು ಮಾಡೋಣ ಎಂದು 16ಕ್ಕೆ ಒಪ್ಪಿದ್ದೇವೆ. ಈ ರೀತಿ ಎದ್ದು ಮಾತನಾಡಿದರೆ ಏನು ಅರ್ಥವಾಗುತ್ತದೆ ಎಂದರೆ ಸರಕಾರ ಅಡಗಿಸಲಿಕ್ಕೆ ಬಹುಶಃ ಯಾವ ಸಂದರ್ಭದಲ್ಲೂ ಕೂಡ ಇಷ್ಟು ವಿಸ್ತರಣೆ ಮಾಡಿದ್ದುದು ಇಲ್ಲ. ಯಾವ ವಿಚಾರ ಹೇಳಿದರೂ ಕೂಡ ಸೈ ಎಂದು ಹೇಳಿದೆವು. ಒಮ್ಮೆಲೆ ಎದ್ದು ನಾವು ಯಾವುದೋ ಹೇಳುತ್ತಿದ್ದೇವೆಂದು ಇಲ್ಲಿ ಬರಬಾರದು. ಬಿ.ಡಿ.ಎ. ಮಸೂದೆ ತಿರಸ್ಕೃತವಾಗಿ ಬಂದಿದೆ. ರಿಟ್ ಪಿಟಿಷನ್ ಬಂದಿದ್ದು ಈ ವಸೂಲಾತಿಗೆ ಅಧಿಕಾರವಿಲ್ಲವೆಂದು ಇಂತಹ ಕಾರ್ಯಕ್ರಮಗಳು ಬಂದಿದೆ. ಅದು ತಮಗೂ ಗೊತ್ತಿದೆ. My Government would like to avoid issue of ordinances. ನಾವು ಪದೇ ಪದೇ ಆರ್ಡಿನೆನ್ಸ್ ಅನ್ನು ತರುವುದಕ್ಕೆ ಇಚ್ಛೆಪಡುವುದಿಲ್ಲ. ನಾವು ಅದನ್ನು ಅವಾಯ್ಡ್ ಮಾಡುತ್ತೇವೆ. ತಾವು ಒಮ್ಮೆ ಇದನ್ನು ಇಲ್ಲಿ ಪಾಸ್ ಮಾಡಿದರೆ, ಹಾಗೆ ಪಾಸ್ ಮಾಡಿದ್ದನ್ನು 5 ನಿಮಿಷದಲ್ಲಿ ಮುಗಿಸಿ ಅಲ್ಲಿಗೆ ಕಳಿಸಬಹುದು ಇವತ್ತು ಆ ಸದನ ಮುಗಿಯುವುದು ಇದೆ.

ಶ್ರೀ ಆರ್.ವಿ. ದೇಶಪಾಂಡೆ:– ಒಪ್ಪಿಕೊಳ್ಳುತ್ತೇನೆ, ಈ ಮನೆಯಿಂದ ಅಲ್ಲಿಗೆ ಹೋದಂತಹ ಬಿಲ್ ಪಾಸಾಗದೆ ಡಿಫೀಟ್ ಆಗಿ ಇಲ್ಲಿಗೆ ಬಂದಿದೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ:– ಇದಾದನಂತರ ಎಲ್ಲಾ ವಿಷಯಗಳನ್ನೂ ತೆಗೆದುಕೊಳ್ಳೋಣ.

ಶಾಸನ ರಚನಾ ಕಾರ್ಯಕಲಾಪಗಳು

1993ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):– ಮಾನ್ಯ ಉಪಾಧ್ಯಕ್ಷರೇ, 1993ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ (ವಿಧಾನ ಪರಿಷತ್ತಿನಿಂದ ತಿರಸ್ಕೃತವಾಗಿರುವ)ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:– ಪ್ರಸ್ತಾವವೇನೆಂದರೆ 1993ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ ವಿಧಾನ ಪರಿಷತ್ತಿನಿಂದ ತಿರಸ್ಕೃತವಾಗಿರುವುದನ್ನು ಪರ್ಯಾಲೋಚಿಸುವುದು.

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಹೆಚ್. ಏಕಾಂತಯ್ಯ:– ಇದರ ಬಗ್ಗೆ ಚರ್ಚೆ ಇಲ್ಲವೇ?

ಉಪಾಧ್ಯಕ್ಷರು:– ಇದರ ಬಗ್ಗೆ ಚರ್ಚೆಯಾಗಿದೆ.

† ಶ್ರೀ ಹೆಚ್. ಏಕಾಂತಯ್ಯ:- ಮತ್ತೊಂದು ಸಾರಿ ಆಗಲಿ, ಏತಕ್ಕೋಸ್ಕರ ವಾಪಸ್ ಬಂದಿತು. ಆಡಳಿತಪಕ್ಷದ ಸದಸ್ಯರು ಏನು ಹೇಳುತ್ತಾರೆ ಸ್ವಲ್ಪ ಅವಕಾಶ ಮಾಡಿಕೊಡಿ. ಅವರು ಹೇಳಿದಮೇಲೆ ನಾನು ಮಾತನಾಡುತ್ತೇನೆ. ಅವರು ಏನೋ ಮಾತನಾಡಲಿಕ್ಕೆ ಇಷ್ಟ ಪಡುತ್ತಿದ್ದಾರೆ. ಅವರು ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ. ನನ್ನ ಹಕ್ಕನ್ನು ನೀವು ಏತಕ್ಕೆ ತೆಗೆದುಕೊಳ್ಳುತ್ತೀರಿ, ನನ್ನ ಪರವಾಗಿ ನೀವೇ ಮಾತನಾಡುವುದಾದರೆ ನನ್ನದೇನು ತಕರಾರು ಇಲ್ಲ.

ಸನ್ಮಾನ್ಯ ಸಭಾಧ್ಯಕ್ಷಣಿಯವರೇ ಈಗ ಏನು ಮುಖ್ಯಮಂತ್ರಿಗಳು ಈ ವಿಧೇಯಕವನ್ನು ಮಂಡಿಸಿದ್ದಾರೆ ಅದನ್ನು ವಿರೋಧಿಸಿ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಮೊಟ್ಟ ಮೊದಲನೆಯದಾಗಿ ಈಗಾಗಲೇ ಎರಡುದಿವಸಗಳ ಹಿಂದೆ ಈ ವಿಧೇಯಕದ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಗಿದೆ. ಚರ್ಚೆಯಾದ ನಂತರ ವಿಧಾನಪರಿಷತ್ತಿಗೆ ಹೋದಂಥ ಈ ಒಂದು ಮಸೂದೆ ಅಲ್ಲಿ ಸೋಲನ್ನು ಅನುಭವಿಸಿ ಇಲ್ಲಿಗೆ ಬಂದಿದೆ. ವಿಧಾನಪರಿಷತ್ತಿನ ಹಿರಿಯ ಸದಸ್ಯರು ಏನಿದ್ದಾರೆ ಮೇಲ್ಮನೆಯ ಸದಸ್ಯರುಗಳು ಒಂದು ಯೋಗ್ಯವಾದಂಥ ಉಚಿತವಾದಂಥ ನಿರ್ಣಯವನ್ನು ತೆಗೆದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ ಯಾವ ಒಂದು ಉದ್ದೇಶಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆಂದರೆ ಈ ವಿರೋಧಪಕ್ಷದ ಸದಸ್ಯರುಗಳು ಅಥವಾ ಈ ಒಂದು ಮಸೂದೆಯನ್ನು ವಿರೋಧ ಮಾಡಿದಂಥ ಎಲ್ಲಾ ಸದಸ್ಯರುಗಳು ಮಸೂದೆಯ ಭಾವನೆಯನ್ನು ಅರ್ಥ ಮಾಡಿಕೊಂಡು ಈ ಮಸೂದೆಗೆ ಒಂದು ಸೋಲನ್ನು ಉಣಿಸಿದ್ದಾರೆಂದರೆ ತಪ್ಪಾಗಲಾರದು. ಇವತ್ತಿನ ದಿವಸ ಏನು ಬಿ.ಡಿ.ಎ. ಇದೆ. ಅದು ತನ್ನ ಕಾರ್ಯಕ್ಷೇತ್ರವನ್ನು ಮೀರಿ ಕೆಲಸ ಮಾಡುತ್ತಿದೆ ಎಂದರೆ ತಪ್ಪಾಗಲಾರದು. ಬಿ.ಡಿ.ಎ. ಇರುವುದು ನನಗೆ ಗೊತ್ತಿರುವ ಹಾಗೆ ಈ ಒಂದು ನಗರದ ಅಭಿವೃದ್ಧಿಗೋಸ್ಕರ, ಅದರಲ್ಲೂ ಮುಖ್ಯವಾಗಿ ನಾಗರೀಕರಿಗೆ ನಿವೇಶನಗಳನ್ನು ಹಂಚುವಂಥ ಕೆಲಸ ಮಾಡಲಿಕ್ಕೆ. ಈ ಮಾತನ್ನು ನಾವು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇವೆ. ಆದರೆ ಬಿ.ಡಿ.ಎ. ಮಾಡುತ್ತಿರುವುದೇನೆಂದರೆ ಆ ಒಂದು ಕೆಲಸವನ್ನು ಬಿಟ್ಟು ಉಳಿದ ಎಲ್ಲಾ ಕೆಲಸವನ್ನು ಮಾಡಲಿಕ್ಕೆ ಅಭಿವೃದ್ಧಿ ಪ್ರಾಧಿಕಾರ ಇದೆ ಎಂದು ನಾನು ಭಾವಿಸಿದ್ದೇನೆ. ಸನ್ಮಾನ್ಯ ಅಧ್ಯಕ್ಷಣಿಯವರೇ ಮುಖ್ಯವಾಗಿ ಕಳೆದ ಹಲವಾರು ವರ್ಷಗಳಿಂದ ಬಿ.ಡಿ.ಎ. ಮಾಡಿರುವಂಥ ಒಂದೇ ಒಂದು ಕೆಲಸವೆಂದರೆ ಈ ಒಂದು ಭೂಮಿಯನ್ನು ಸ್ವಾಧೀನ ಪಡಿಸುವುದಕ್ಕೆ ನೋಟಿಫೈ ಮಾಡುವುದು ಮತ್ತು ಸಂಬಂಧಪಟ್ಟ ಪಟ್ಟಭದ್ರ ಹಿತಾಸಕ್ತಿಗಳು ಬಂದರೆ ಅದನ್ನು ಡಿ ನೋಟಿಫೈ ಮಾಡುವುದು ಈ ಎರಡು ಕೆಲಸಗಳನ್ನು ಬಿಟ್ಟು, ಬಿ.ಡಿ.ಎ. ಯಾವ ಕೆಲಸವನ್ನು ಮಾಡಿದೆಯೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಇಲ್ಲಿಯವರೆಗೆ ಬಿ.ಡಿ.ಎ. ಎಷ್ಟು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ನೋಟಿಫೈ ಮಾಡಿದೆ, ಎಷ್ಟು ಡಿ ನೋಟಿಫೈಡ್ ಮಾಡಿದೆ, ಈ ವಿಚಾರವನ್ನು ಈ ಸಭೆಯ ಮುಂದೆ ನೀಡಬೇಕು. ಇದರ ಬಗ್ಗೆ ನಾವು ಗಮನಿಸಿದಾಗ ಪಟ್ಟಣದ ನಾಗರೀಕರಿಗೆ, ನಿವೇಶನರಹಿತರು ಏನಿದ್ದಾರೆ ಅವರ ಅವಶ್ಯಕತೆಗಳನ್ನು ಪೂರೈಸಲಿಕ್ಕೆ ಬಿ.ಡಿ.ಎ. ಇಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅದಕ್ಕಿಂತ ಹೆಚ್ಚಾಗಿ ಇವತ್ತಿನದಿವಸ ಬಿಡಿಎ ಏನಿದೆ ಅದಕ್ಕೆ ಸಲ್ಲದ, ಅದಕ್ಕೆ ಅಧಿಕಾರವಿಲ್ಲದಂಥ ಕೆಲಸಗಳನ್ನು ಮಾಡಲಿಕ್ಕೆ ಅದು ಪ್ರಯತ್ನ ಮಾಡುತ್ತಿದೆ. ಸನ್ಮಾನ್ಯ ಅಧ್ಯಕ್ಷಣಿಯವರೇ ಯಾವುದಾದರೂ ಒಂದು ಯೋಜನೆಯನ್ವಯ ಒಂದು ಬಡಾವಣೆಯನ್ನು ನಿರ್ಮಾಣ ಮಾಡಿದರೆ ಅದಕ್ಕೆ ಬೇಕಾದಂಥ ಮೂಲಭೂತವಾದ ಅವಶ್ಯಕತೆಗಳನ್ನು ಅವರು ಮಾಡಿದಮೇಲೆ ಅದನ್ನು ವರ್ಗಾಯಿಸಬೇಕಾದದ್ದು ಅತ್ಯಂತ ಅವಶ್ಯಕ. ಅದನ್ನು ಬಿಟ್ಟು ಇವರೇ ಎಲ್ಲಾ ಕೆಲಸ ಮಾಡಲಿಕ್ಕೆ ಹೊರಟಿದ್ದಾರೆ. ಇವತ್ತಿನದಿವಸ ನಗರವಾಸಿಗಳ ಒಂದು ಬವಣೆಯನ್ನು ಹೇಳಲಿಕ್ಕೆ ಸಾಧ್ಯವಾಗುತ್ತಿಲ್ಲ. ಅವರು ಎಸ್.ಐ.ಎಸ್, ಎಜ್ಯುಕೇಷನ್ ಸೆಸ್ ಎಂದು ತೆಗೆದುಕೊಳ್ಳುತ್ತಿದ್ದಾರೆ. ಹೆಲ್ತ್ ಸೆಸ್ ತೆಗೆದುಕೊಳ್ಳುತ್ತಿದ್ದಾರೆ. ನಾನು ತಮ್ಮನ್ನು ಕೇಳುತ್ತಿದ್ದೇನೆ. ಈ ತೆರಿಗೆಯನ್ನು ತೆಗೆದುಕೊಳ್ಳುತ್ತಿರುವಂಥ ಸರ್ಕಾರವಾಗಲಿ ಬಿ.ಡಿ.ಎ. ಆಗಲಿ

ಆ ನಿವಾಸಿಗಳ ಉಪಯೋಗಕ್ಕೋಸ್ಕರ ತೆರಿಗೆ ಹಣವನ್ನು ಉಪಯೋಗ ಮಾಡುತ್ತಿದೆಯೇ? ಅಲ್ಲಿ ಮಾಡಿರುವಂಥ ರಸ್ತೆಗಳನ್ನು ತಾವು ನೋಡಬೇಕು, ಅಲ್ಲಿ ಟಾರ್‌ರೋಡ್‌ಗಳೆಂದು ಮಾಡಿರುತ್ತಾರೆ, ಆ ಟಾರ್‌ರೋಡ್‌ಗಳ ಮೇಲೆ ಗರಿಕೆ ಬೆಳೆದಿರುತ್ತದೆ. ಬೇಕಾದರೆ ಬನ್ನಿ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಇವರು ಮಾಡುವಂಥ ರಸ್ತೆಗಳು ಅತ್ಯಂತ ಕಳಪೆಮಟ್ಟದ ರಸ್ತೆಗಳು ಇತ್ತೀಚೆಗೆ ಒಂದು ಪ್ರಕರಣ ನನ್ನ ಗಮನಕ್ಕೆ ಬಂದಿದೆ. ಅವರು ಕಂಟ್ರಾಕ್ಟ್‌ಗಳನ್ನು ಕೊಡುತ್ತಾರೆ. ಯಾವ ರೀತಿ ಯಾರಿಗೆ ಕಂಟ್ರಾಕ್ಟ್ ಕೊಡುತ್ತಾರೆನ್ನುವುದು ಯಾರಿಗೂ ಗೊತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ ಬಿ.ಡಿ.ಎ.ಗೆ ಕಾನೂನು ಮತ್ತು ರೂಲ್ಸ್ ಇದೆ. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ ಬಿ.ಡಿ.ಎ. ಪ್ರಾಧಿಕಾರ ರಚಿತವಾದಂದಿನಿಂದ ಇವತ್ತಿನವರೆಗೂ ಸಹ ಕಾನೂನಿನನ್ವಯ ರೂಪಿಸಬೇಕಾದಂಥ ನಿಯಮಗಳನ್ನು ರೆಗ್ಯುಲೇಷನ್‌ನ್ನು, ಬೈಲಾವನ್ನು ರೂಪಿಸಿಕೊಂಡಿದೆಯೆ? ತಮ್ಮ ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬಿ.ಡಿ.ಎ. ಕಾನೂನಿನ ಆಡಳಿತದಲ್ಲಿ ಏನಿದೆ, ಯಾವ ವಿಚಾರಗಳನ್ನು ರೆಗ್ಯುಲೇಷನ್‌ಗಳನ್ನು ಮಾಡಿಕೊಳ್ಳಬೇಕಾಗಿದೆ, ಯಾವ ವಿಚಾರಗಳಿಗೆ ನಿಯಮಗಳನ್ನು ರೂಪಿಸಿಕೊಳ್ಳಬೇಕಾಗಿದೆ, ಬೈಲಾಗಳನ್ನು ರೂಪಿಸಿಕೊಳ್ಳಬೇಕಾಗಿದೆ, ಸರ್ಕಾರ ಮಂಜೂರಾತಿ ಪಡೆದುಕೊಳ್ಳಬೇಕಾಗಿದೆ ಅಂಥ ಯಾವುದೇ ಅವಶ್ಯಕವಾದಂಥ ನಿಯಮಗಳನ್ನು ಇವತ್ತಿನವರೆಗೂ ಅವರು ಮಾಡಿಕೊಂಡಿಲ್ಲವೆಂದರೆ ಬಿ.ಡಿ.ಎ. ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬುದಕ್ಕೆ ಅವರೇ ಆಲೋಚನೆ ಮಾಡಬೇಕಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ, ಬಿ.ಡಿ.ಎ.ಗೆ ಸೇರಿದ ಲೆಕ್ಕಪತ್ರಗಳನ್ನು ಪೂರ್ಣವಾಗಿ ತಯಾರಿಸಿದ್ದೀರಾ? ಇಲ್ಲ; ನಾಚಿಕೆಪಡಬೇಕು. ಇಷ್ಟು ಬೃಹದಾಕಾರವಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡತಕ್ಕ ಮಂಡಲಿಯಲ್ಲಿ ಬೇಕಾದ ಲೆಕ್ಕಪತ್ರಗಳನ್ನು ಇಡುವ ಪದ್ಧತಿ ಇಲ್ಲವೆಂದರೆ, ಇದಕ್ಕಿಂತ ನಾಚಿಕೆಗೇಡಿನ ಪ್ರಸಂಗ ಯಾವುದು ಇದೆ? ದಿಢೀರನೆ ಅಧಿಕಾರಿಗಳನ್ನು ನೇಮಿಸುತ್ತಾರೆ. ಕಾನೂನು ಪ್ರಕಾರ, ನಿಯಮಗಳ ಪ್ರಕಾರ ಲೆಕ್ಕಪತ್ರಗಳನ್ನು ಇಡುವುದಿಲ್ಲ, ಆಡಿಟ್ ಮಾಡಿಸುವುದಿಲ್ಲ. ಅಂಥ ಪರಿಸ್ಥಿತಿ ಅಲ್ಲಿ ಇದೆ. ಮುಖ್ಯಮಂತ್ರಿಗಳು ಒಂದಕ್ಕೆ ಉತ್ತರ ಕೊಡಲಿ, 31-3-92ಕ್ಕೆ ಎಷ್ಟು ಅರ್ಜಿಗಳನ್ನು ಕೊಟ್ಟಿದ್ದಾರೆ, ಅವುಗಳಲ್ಲಿ ಎಷ್ಟು ವಿಲೇವಾರಿಯಾಗಿವೆ, ಎಷ್ಟು ಪೆಂಡಿಂಗ್ ಇವೆ ಎಂಬುದನ್ನು ಹೇಳಿದರೆ ಇವತ್ತಿನ ದಿವಸ ನಾನು ಕ್ಷಮಾಪಣೆ ಕೇಳುತ್ತೇನೆ. ಅನೇಕ ಜನ ಸೈಟುಗಳಿಗೆ ಅರ್ಜಿಗಳನ್ನು ಕೊಟ್ಟಿದ್ದಾರೆ ಮತ್ತು ಬೇರೆ ಬೇರೆ ಕೆಲಸಗಳಿಗೆ ಅರ್ಜಿಗಳನ್ನು ಕೊಟ್ಟಿದ್ದಾರೆ. ಎಲ್ಲಿಯವರೆಗೆ ದಕ್ಷಿಣೆ ಕೊಟ್ಟು ಹೋಗುವುದಿಲ್ಲ ಅಲ್ಲಿಯವರೆಗೆ ವಿಲೇವಾರಿಯಾಗುವುದಿಲ್ಲ. ಎಷ್ಟು ಅರ್ಜಿಗಳು ಇವೆ? ಮೂರು ವರ್ಷಕ್ಕೆ ಮೊದಲು ಇದ್ದ ಅರ್ಜಿಗಳ ಸಂಖ್ಯೆಯನ್ನು ಹೇಳಲಿ; ಆಗ ಇವತ್ತಿನ ದಿವಸ ಬಿಡಿಎ ಹೇಗೆ ಕೆಲಸ ಮಾಡುತ್ತದೆಂದು ಗೊತ್ತಾಗುತ್ತದೆ. ಇಷ್ಟೊಂದು ಹೊಣೆಗೇಡಿತನ ಮಾಡುವ ಬಿಡಿಎಗೆ ವಿಶೇಷ ಅಧಿಕಾರ ಕೊಡುವ ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ. ಈ ಮಸೂದೆಯನ್ನು ಏನು ವಿಧಾನ ಪರಿಷತ್ತಿನವರು ಸೋಲಿಸಿ ಪಾಪಸ್ಸು ಕಳುಹಿಸಿದ್ದಾರೆ ಅದು ಸರಿ, ಅವರು ನ್ಯಾಯವಾದ ಕೆಲಸವನ್ನು ಮಾಡಿದ್ದಾರೆಂದು ಮಸೂದೆಯ ಬಗ್ಗೆ ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):- ಮಾನ್ಯ ಅಧ್ಯಕ್ಷಣಿಯವರೆ, ಈ ಬಿಲ್ಲಿನ ಕೆಲವು ವಿಷಯಗಳನ್ನು ಆಗಲೇ ವಿರೋಧ ಮಾಡಿ ಆ ಮನೆಗೆ ಹೋಗಿತ್ತು. ಮೊದಲನೆಯದಾಗಿ ನಾವು ಮೂಲಭೂತವಾಗಿ ನಾವು ಇದನ್ನು ವಿರೋಧ ಮಾಡಬೇಕಾಗಿತ್ತು. ಸೆಕ್ಷನ್ 28 ಎ,ಬಿ,ಸಿ, ಏನಿದೆ ಇದರಲ್ಲಿ ಈ ರಾಜ್ಯದ ನ್ಯಾಯಾಲಯ ಕೊಟ್ಟ ಆದೇಶದ ಮೇರೆಗೆ ಬದಲಾವಣೆ ತಂದಿದ್ದಾರೆ. ಆದೇಶ ನೀಡುವಾಗ ನ್ಯಾಯಾಲಯ ಸರ್ಕಾರದ ಎರಡು ಗುರುತರವಾದ ಜವಾಬ್ದಾರಿಗಳನ್ನು ಹೇಳಿ ಎಚ್ಚರಗೊಳಿಸಿದೆ. ಮೊದಲನೆಯದಾಗಿ, ಪೌರ ಸೌಲಭ್ಯಗಳನ್ನು ಒದಗಿಸಿಕೊಡಬೇಕಾದುದು ಬಿ.ಡಿ.ಎ.ನ ಮೂಲಭೂತವಾದ ಕರ್ತವ್ಯ, ಅದು ಆಬ್ಲಿಗೇಟರಿ ಡ್ಯೂಟಿ. ಅದನ್ನು ಮಾಡದೆ ಕರವನ್ನು ವಸೂಲ್ಮಾಡತಕ್ಕದ್ದು, ನ್ಯಾಯಕ್ಕೆ ಮತ್ತು ಎಲ್ಲದಕ್ಕೂ ವಿರುದ್ಧವಾದುದು. ಆದುದರಿಂದ

ಕರವನ್ನು ವಸೂಲ್ಮಾಡುವ ಅಧಿಕಾರ ನಿಮಗೆ ಬರಬೇಕಾದರೆ ಜನರಿಗೆ ಮೊದಲು ಸವಲತ್ತು ಕೊಡಿ. ನಾನು ಪ್ರಾರ್ಥಿಸುವುದು ಇಷ್ಟೆ, ನಾವು ವಿರೋಧ ಮಾಡಿದರೂ ಪಾಸ್ ಮಾಡಿ ಕಳುಹಿಸಿಕೊಡುತ್ತೀರಿ; ಆದರೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪರಿಶೀಲಿಸಬೇಕು. ಸವಲತ್ತು ಒದಗಿಸಿದ ಮೇಲೆ ಕರವನ್ನು ವಸೂಲ್ಮಾಡಬಹುದೆಂದು ಬದಲಾವಣೆ ತನ್ನಿ. I have no objection to collect the tax provided the necessary facilities are provided. ಅಷ್ಟಾದರೂ ಬದಲಾವಣೆ ತರಬೇಕೆಂದು ಪ್ರಾರ್ಥಿಸುತ್ತೇನೆ. ಇದು ಜನತೆಗೆ ಗೊತ್ತಾಗಲಿ. ರಸ್ತೆ ಕೊಡುವುದಿಲ್ಲ, ನೀರು ಕೊಡುವುದಿಲ್ಲ, ಲೈಟ್ ಕೊಡುವುದಿಲ್ಲ, ಸ್ಯಾನಿಟೇಷನ್ ಕೊಡುವುದಿಲ್ಲ, ತೆರಿಗೆ ವಸೂಲ್ಮಾಡುತ್ತೇವೆಂಬುದು ಸರ್ಕಾರದ ನೀತಿಯಾದರೆ ನಮ್ಮದೇನೂ ಅಭ್ಯಂತರವಿಲ್ಲ. ಮತ್ತೊಮ್ಮೆ ಸರ್ಕಾರಕ್ಕೆ ಪ್ರಾರ್ಥಿಸುತ್ತೇನೆ, If the government provides the facilities, we have no objection, tax may be collected. At least that rider may be included.

ಶ್ರೀ ಜೆ.ಸಿ. ಮಾಧುಸ್ವಾಮಿ:– ಸೆಕ್ಷನ್ 7ನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು, ಇದು ನಾಗರೀಕ ಸಮಾಜಕ್ಕೆ ವಿರುದ್ಧವಾದುದು ಎಂದು ನಾವು ಆವೊತ್ತು ಬಾಯ್‌ಕಾಟ್ ಮಾಡಿದ್ದೆವು. ಅದನ್ನು ಮತ್ತೆ ಇವತ್ತು ಮಾಡಬೇಕಾಗುತ್ತದೆ. ಈಗಲೂ ರಿಕ್ವೆಸ್ಟ್ ಮಾಡುತ್ತಿದ್ದೇನೆ ನಾಗರೀಕರು ಕೋರ್ಟಿಗೆ ಹೋಗುವುದು ತಪ್ಪು, ನೀವು ತೀರ್ಮಾನ ತೆಗೆದುಕೊಂಡದ್ದನ್ನು ಪ್ರಶ್ನೆ ಮಾಡುವುದು ತಪ್ಪು ಎಂದು ಸರ್ಕಾರದಲ್ಲಿ ಕಾನೂನುಗಳು ಆಗುತ್ತಾ ಹೋದರೆ ನಾವು ಇದರಲ್ಲಿ ಭಾಗಿಯಾಗುವುದು ಮನುಷ್ಯತ್ವ ಅಲ್ಲವೆಂದು ಭಾವಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ, ಸೆಕ್ಷನ್ 7ನ್ನು ತಾವು ಓದಬೇಕು. ನ್ಯಾಯಾಲಯದಲ್ಲಿ ಏನನ್ನೂ ಪ್ರಶ್ನೆ ಮಾಡುವ ಹಾಗೆ ಇಲ್ಲ ಎಂದು ಕಾನೂನು ತರುವುದಾದರೆ, ನಾವು ಶಾಸಕಾಂಗ ಎಂದು ಒಪ್ಪಿ ಇಲ್ಲಿ ಏಕೆ ಕುಳಿತುಕೊಳ್ಳಬೇಕು? ದಯಮಾಡಿ ಈ ಸೆಕ್ಷನ್ ಅನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ವೈ.ಕೆ. ರಾಮಯ್ಯ:– ಸೆಕ್ಷನ್ 7ರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಸೆಕ್ಷನ್ 7 ಏನು ಹೇಳುತ್ತದೆಂದರೆ ಪ್ರಾಧಿಕಾರ ಬಿಡಿಎ ಅಧಿಕಾರಿಗಳು ಮಾಡಿದಂಥ ಪ್ರತಿಯೊಂದು ಕೆಲಸ ಕಾನೂನುಬದ್ಧವಾಗಿದೆ ಎಂದು ಭಾವಿಸಿಕೊಳ್ಳಬೇಕಂತೆ. "Deem", this is the word used. We should deem. That all the action taken by the BDA and the action taken by the officials of BDA is deemed to be correct. ಅಷ್ಟೇ ಅಲ್ಲ ಸ್ವಲ್ಪ ಕೇಳಿ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಓದಬೇಕು. ಸರ್ಕಾರ ತೆಗೆದುಕೊಂಡಿರತಕ್ಕ ತೀರ್ಮಾನ ಪ್ರಜೆಗೆ ಸರ್ಕಾರದ ಬಗ್ಗೆ ನಂಬಿಕೆ ಬರುವಂತಹ ತೀರ್ಮಾನವಾಗಿರಬೇಕು; ಆತ ಒಪ್ಪುವ ತೀರ್ಮಾನವಾಗಿರಬೇಕು; ಆತನಿಗೆ ಸರ್ಕಾರದ ಬಗ್ಗೆ ಗೌರವ ಉಕ್ಕಿಸುವ ತೀರ್ಮಾನವಾಗಿರಬೇಕು ಎಂದು ತಾವು ಹೇಳುತ್ತಿದ್ದೀರಿ. ತಾವು ಇದರಲ್ಲಿ 'ಡಿ' ಓದಬೇಕು. ಈ ರೀತಿ ಪ್ರೆಸ್ಯೂಮ್ ಮಾಡುವುದು ಅಷ್ಟೇ ಅಲ್ಲ. ಮಾನ್ಯ ಅಧ್ಯಕ್ಷಣಿಯವರೇ, ಮುಂದಕ್ಕೆ 'ಬಿ' ಸೇರಿಸಿದ್ದಾರೆ. ಈ ರೀತಿ ಭಾವಿಸಿಕೊಂಡ ನಡವಳಿಕೆಯನ್ನು ಯಾವುದೇ ಕೋಟಿನಲ್ಲಿ ನಾವು ಹೋಗಿ ಪ್ರಶ್ನೆ ಮಾಡಕೂಡದು, We should presume that the action taken by the BDA shall be correct, right, honest and legal. Further you cannot question it. ಈ ಎರಡೂ ವಿಚಾರಗಳಲ್ಲಿ ದಯವಿಟ್ಟು ಕ್ರಮ ತೆಗೆದುಕೊಳ್ಳಿ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ಬಿಡಿಎ ಎಂದರೆ ಅದು ಒಂದು ಲೂಟಿಗೋಸ್ಕರ ಇರತಕ್ಕ ಸಂಸ್ಥೆ. ಅಲ್ಲಿ ನಡೆಯತಕ್ಕ ಲೂಟಿಯನ್ನು ಪ್ರಶ್ನೆ ಮಾಡಬಾರದು ಎಂದರೆ ಅಂತಹ ಕಾನೂನನ್ನು ನೀವು ಮುಂದೆ ತಂದು ಇದನ್ನು ಒಪ್ಪಿಕೊಳ್ಳಿ ಎಂದು ಹೇಳುವುದಾದರೆ ಅದಕ್ಕೆ ನಮ್ಮ ಕಡು ವಿರೋಧ ಇದೆ. ನೀವು ಹೀಗೇ ಮಾಡುತ್ತೀರೆಂದರೆ, ಇದೇ ರೀತಿ ಆಡಳಿತ

ನಡೆಸುತ್ತೀರೆಂದರೆ, ಮೇಜರ್ ಸರ್ಜರಿಯನ್ನು ಇದೇ ರೀತಿ ಮಾಡುತ್ತೇವೆಂದರೆ ಮಾಡಿಕೊಳ್ಳಿ. ಏಕೆಂದರೆ ನಿಮಗೆ ಕೈ ಎತ್ತುವುದಕ್ಕೆ ಜನರಿದ್ದಾರೆ, ನೀವು ಮಾಡಿಕೊಳ್ಳಿ. ನಾವು ಏನು ಹೇಳುವುದಕ್ಕಾಗುತ್ತದೆ? ನಮ್ಮ ಪಾಡಿಗೆ ನಾವು ಹೊರಗಡೆ ಇರಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಕೈ ಎತ್ತುವ ಜನ ಈ ಕಡೆ ಎಷ್ಟು ಜವಾಬ್ದಾರರೋ ಆ ಕಡೆಯೂ ಕೂಡ ಅಷ್ಟೇ ಜವಾಬ್ದಾರರು ಇದ್ದಾರೆ. ಆದುದರಿಂದ ಜವಾಬ್ದಾರಿಯಿಂದಲೇ ಕೈ ಎತ್ತುತ್ತಾರೆ, ಜವಾಬ್ದಾರಿಯಿಂದಲೇ ಕೈ ಕೆಳಗೆ ಹಾಕುತ್ತಾರೆ. ಇದರ ಬಗ್ಗೆ we cannot pass reflection on the members. ಜವಾಬ್ದಾರಿಯಿಂದ ಮಾಡುತ್ತಾರೆ. ಪ್ರಶ್ನೆ ಏನೆಂದರೆ, ಕ್ಲಾಸ್ 7ಗೆ ಬರುತ್ತೇನೆ. ಕ್ಲಾಸ್ 7 ಏನು ಹೇಳುತ್ತದೆ? it is a validation clause, ಜುಲೈ 24, 1992ರವರೆಗೆ ಹೈಕೋರ್ಟ್ ಏನು ತೀರ್ಪು ಕೊಟ್ಟಿದೆ, ಆ ತೀರ್ಪು ಕೊಟ್ಟ ಹಿಂದೆ ಅನೇಕ ವರ್ಷಗಳಿಂದ ಬಹುಶಃ ಬಿಡಿಎ ಪ್ರಾರಂಭವಾದಾಗಿನಿಂದ ಅವರು ಈ ತೆರಿಗೆ, ಸೆಸ್ ಏನು ವಸೂಲಿ ಮಾಡಿದ್ದಾರೆ, ಅದನ್ನು ನಿಮ್ಮ ಕಾಲದಲ್ಲೂ ಮಾಡಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೇ....

ಶ್ರೀ ಎಂ. ವೀರಪ್ಪಮೊಯಿಲಿ:– ಸ್ವಲ್ಪ ನಾನು ಹೇಳುವುದನ್ನು ಕೇಳಿ. ತಾವು ಹೇಳಿದ್ದನ್ನು ನಾನು ಕೇಳಿದ್ದೇನೆ. ಇಲ್ಲಿ ಪ್ರಶ್ನೆ ನೋಡಬೇಕು. ಇಲ್ಲಿ ಒಂದು ಹೆಡ್‌ಲೈನ್ ಇದೆ. ಆ ತಾರೀಖಿನವರೆಗೆ ಏನು ವಸೂಲಿ ಮಾಡಿದ್ದೀವೆ ಅದನ್ನು ಹೈಕೋರ್ಟ್ ತೀರ್ಪು ಪ್ರಕಾರ ಹಿಂದಕ್ಕೆ ಕೊಡಬೇಕೆಂದು ಬರುತ್ತದೆ. ಹೈಕೋರ್ಟ್ ತೀರ್ಪಿನ ಪ್ರಕಾರ ಬಿಡಿಎ ಪ್ರಾರಂಭ ಆದಾಗಿನಿಂದ ಏನು ಸೆಸ್ ವಸೂಲಿ ಮಾಡಿದ್ದಾರೆ ಅದು ಕಾನೂನು ಪ್ರಕಾರ ಇಲ್ಲ ಎಂದು ಹೈಕೋರ್ಟ್ ತೀರ್ಪು ಬಂದಿದೆ. ಈಗ ಇದೆಲ್ಲವನ್ನೂ ವಾಪಸ್ಸು ಕೊಡಬೇಕೇ? ಕೊಡುವುದಕ್ಕೆ ಸಾಧ್ಯವಿದೆಯೇ? ಏಕೆಂದರೆ ಪೂರ್ತಿ ಆ ಹಣವನ್ನು ಉಪಯೋಗ ಮಾಡಿದ್ದಾರೋ ಇಲ್ಲವೋ ಅದು ಪ್ರಶ್ನೆ ಬೇರೆ. ಆದರೆ ಬಿಡಿಎ ಬಡಾವಣೆಗಳನ್ನು ಮಾಡಿದೆ, ರಸ್ತೆಗಳನ್ನು ಮಾಡಿದೆ. ರಸ್ತೆಗಳನ್ನು ಮಾಡಿದ ಹಣವನ್ನು ಕೂಡ ಹಿಂದಕ್ಕೆ ಕೊಡಬೇಕಾಗುತ್ತದೆ. ಮಾಧುಸ್ವಾಮಿಯವರಿಗೆ ಬಿಡಿಎ ಬಡಾವಣೆಯಲ್ಲಿ ಮನೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅಲ್ಲಿ ನಿಮ್ಮ ಮನೆ ಇದ್ದರೆ, ಕ್ಲಾಸ್ 7 ಇಲ್ಲದಿದ್ದರೆ ನಿಮ್ಮ ನಿವೇಶನಕ್ಕೆ ಆ ಬಡಾವಣೆಯಲ್ಲಿ ಬಿಡಿಎನವರು ಖರ್ಚು ಮಾಡಿದ ಹಣವನ್ನು ಕೂಡ ಹಿಂದಕ್ಕೆ ಕೊಡಬೇಕು. ನಿಮ್ಮ ಬೀದಿಗೆ ಬೀದಿದೀಪ ಹಾಕಿದ್ದರೂ ಆ ಹಣವನ್ನು ಹಿಂದಕ್ಕೆ ಕೊಡಬೇಕು. ಡ್ರಯನೇಜ್ ಮಾಡಿದ್ದರೂ ಕೂಡ ಹಿಂದಕ್ಕೆ ಕೊಡಬೇಕು. ಈಗ ಜಯನಗರ ಬಡಾವಣೆ ಇದೆ. ಅಲ್ಲಿ ಡ್ರೈನೇಜ್ ಇಲ್ಲವೇ? ಡಾಂಬರು ಕೆಲಸ ಆಗಿಲ್ಲವೇ? ಪಬ್ಲಿಕ್ ಅಮಿನಿಟೀಸ್ ಕೊಟ್ಟಿಲ್ಲವೇ? ಈ ಬಗ್ಗೆ ನಾನು ಕೇಳುತ್ತೇನೆ. ಈ ಕ್ಲಾಸ್ ಇಲ್ಲದಿದ್ದರೆ, ಹೈಕೋರ್ಟ್ ತೀರ್ಪು ಪ್ರಕಾರ ಜಯನಗರದ ನಿವಾಸಿಯೂ ಕೂಡ ರೀಫಂಡ್ ಕೇಳುವುದಕ್ಕೆ ಅವಕಾಶವಾಗುತ್ತದೆ. ತಾವು ಇದರ ಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳಬೇಕು. ಮುಂದೆ ಯಾವ ರೀತಿ ತೆರಿಗೆ ಹಾಕುತ್ತೀರಿ, ಯಾವದರ ಇರುತ್ತದೆ ಅದಕ್ಕೆ ಅಲ್ಲ ಇದರ ಬಗ್ಗೆ ಕೋರ್ಟ್‌ನಲ್ಲಿ ಪ್ರಶ್ನೆ ಮಾಡಬಾರದು ಎಂದು ಕ್ಲಾಸ್ 7ರಲ್ಲಿ ಹೇಳುತ್ತಿಲ್ಲ. ಹೈಕೋರ್ಟ್ ತೀರ್ಪು ಪ್ರಕಾರ ಹಿಂದೆ ಏನು ಕೊಡಬೇಕೆಂದು ಇದೆ ಅದನ್ನು ವ್ಯಾಲಿಡೇಟ್ ಮಾಡತಕ್ಕದ್ದು ಕ್ಲಾಸ್ 7ರಲ್ಲಿ ಇದೆ. ಇಂತಹದ್ದು ಸೇಲ್ಸ್ ಟ್ಯಾಕ್ಸ್‌ನಲ್ಲಿ ಬರುತ್ತದೆ. ತಾವೂ ಮಂತ್ರಿಗಳಾಗಿದ್ದಿರಿ. ತಮಗೂ ಗೊತ್ತಿದೆ. ಇದು ದೊಡ್ಡ ಆಕ್ಷೇಪಣಾರ್ಹ ಕ್ಲಾಸ್ ಅಲ್ಲ. ದಯವಿಟ್ಟು ಚೆನ್ನಾಗಿ ಪರಾಮರ್ಶಿಸಿ ನೋಡಿದರೆ ತಾವು ಹೇಳುವ ರೀತಿ ಮಾಡುವುದಕ್ಕೆ ಬರುವುದಿಲ್ಲ. ಬಿಡಿಎನವರು ಇಂದಿರಾನಗರದಲ್ಲಿ ರಸ್ತೆ ಮಾಡಿಲ್ಲವೆ? ಪಬ್ಲಿಕ್ ಅಮಿನಿಟೀಸ್ ಕೊಟ್ಟಿಲ್ಲವೆ? ಡ್ರೈನೇಜ್ ಮಾಡಿಲ್ಲವೆ? ಎಲ್ಲಾ ಫೆಸಿಲಿಟೀಸ್ ಕೊಟ್ಟಿದ್ದಾರೆ. ಕೊಟ್ಟಿದ್ದು ಅಷ್ಟು ಸಮರ್ಪಕವಾಗಿಲ್ಲವೆಂದು ತಾವು ಹೇಳಬಹುದು. This is the argument you make. ನಮ್ಮ ಏಕಾಂತಯ್ಯನವರು ಬಹಳ ಚೆನ್ನಾಗಿ ಹೇಳಿದರು. ನಮ್ಮ ಬೈರೇಗೌಡರು ಮತ್ತು

ರಾಮಯ್ಯನವರು ಹೇಳಿದರು. ನೀವೇನು ಜನರಿಂದ ಹಣವನ್ನು ವಸೂಲಿ ಮಾಡುತ್ತೀರಿ, supposing in an extension you collect money, you must spend the money to that locality. I quite agree with you. That I undertake to do. ಏಕೆಂದರೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಪಬ್ಲಿಕ್ ಸೆನ್ಸಿಟೀವ್‌ನೆಸ್ ಹೊರಟುಹೋಗಿದೆ. ತಾವು ಹೇಳುವುದು 'ಕರೆಕ್ಟ್. ನಾನು ನಿಮ್ಮ ಮಾತನ್ನು ಒಪ್ಪುತ್ತೇನೆ. ಆ ಸಂಸ್ಥೆಯಲ್ಲಿ ಪಬ್ಲಿಕ್ ಸೆನ್ಸಿಟೀವ್‌ನೆಸ್ ಹೊರಟುಹೋಗಿದೆ.

SRI Y.K. RAMAIAH:- I myself is a victim. That is my problem.

SRI M.VEEEAPPA MOILY:- Many people are victims today. ಆವರೇನು ವಸೂಲಿ ಮಾಡುತ್ತಾರೆ ಅದಕ್ಕೆ ಸರಿಸಮಾನವಾದ ಒಂದು ಸೇವೆಯನ್ನು ಬಿ.ಡಿ.ಎ.ನಿಂದ ಕೊಡಬೇಕು. ಆ ಸಂಸ್ಥೆ ಅದಕ್ಕಾಗಿಯೇ ಹುಟ್ಟಿದೆ. Such bodies are irresponsible now. I will tell you ಆ ಫೀಲಿಂಗ್ಸ್ ಕೊಡದೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ನಡೆದುಕೊಂಡು ಬಂದಂತಹ ದಾರಿಯನ್ನು ನೋಡಿದರೆ ಈ ಭಾವನೆ ಎಲ್ಲರಿಗೂ ಬಂದಿದೆ. ನನಗೆ ಬಂದಿದೆ, ಮಾನ್ಯ ಬೈರೇಗೌಡರಿಗೆ ಬಂದಿದೆ, ನಾವು ಆ ಕಡೆ ಇದ್ದರೆ ಇದೇ ತರಹ ವಾದ ಮಾಡುತ್ತಿದ್ದೆವು.

ಶ್ರೀ ಹೆಚ್. ಏಕಾಂತಯ್ಯ:- ಆ ಭಾವನೆಯನ್ನು ಹೊಗಲಾಡಿಸುವುದಕ್ಕೆ ನೀವೇನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ಹೇಳಿ?

ಶ್ರೀ ಎಂ. ವೀರಪ್ಪಮೊಯಿಲಿ:- ಅದು ಮುಖ್ಯ. ಡೀ ನೋಟೀಫೈ ಆಗಿದ್ದನ್ನು ಈಗ ನೋಟಿಫೈ ಏತಕ್ಕೆ ಮಾಡಬೇಕು? ನೋಟಿಫೈ ಮಾಡಿದ ಮೇಲೆ ಡೀ ನೋಟಿಫೈ ಏಕೆ ಮಾಡಬೇಕು ಎನ್ನುವ ಪ್ರಶ್ನೆ ಬರುತ್ತದೆ. ಡೀ ನೋಟೀಫೈ ಮಾಡಬೇಕಾದರೂ ಸಾಕಷ್ಟು ಅನಾನುಕೂಲತೆಯಾಗುತ್ತದೆ. ಏಕೆಂದರೆ ಎಕ್ಸ್‌ಟೆನ್‌ಷನ್‌ಗಳಲ್ಲಿ ಪಿಕ್ ಅಂಡ್ ಚೂಸ್ ಮಾಡಿ ಡೀ ನೋಟಿಫೈ ಮಾಡುವುದಕ್ಕಾಗುವುದಿಲ್ಲ, ರಸ್ತೆ ಮಾಡುವುದಕ್ಕಾಗುವುದಿಲ್ಲ. ಪಬ್ಲಿಕ್ ಅಮಿನಿಟೀಸ್ ಕೊಡುವುದಕ್ಕಾಗುವುದಿಲ್ಲ. ಆದರಿಂದ ಅದರ ಉದ್ದೇಶ ಹೊರಟುಹೋಗುತ್ತದೆ. ಡೀ ನೋಟಿಫೈ ಏನು ಮಾಡಿದ್ದಾರೆ ಇದನ್ನೆಲ್ಲಾ ನಾವು ಪ್ರೀಸ್ ಮಾಡಿದ್ದೇವೆ. ಅಲ್ಲದೆ ಡೀ ನೋಟೀಫಿಕೇಷನ್ ಮಾಡಿದ್ದುದು ಎಷ್ಟು ಯಥೋಚಿತವಾಗಿದೆ ಎಂಬುದನ್ನು ಪುನರ್ ಪರಿಶೀಲನೆ ಮಾಡುತ್ತಿದ್ದೇವೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಯಾವ ಉದ್ದೇಶಕ್ಕೆ ಬೆಂಗಳೂರಿನಲ್ಲಿ ಆಗಿದೆ ಆ ಉದ್ದೇಶವನ್ನು ಪರಿಪೂರ್ಣವಾಗಿ ಪಾಲನೆ ಮಾಡತಕ್ಕ ರೀತಿಯಲ್ಲಿ ನಾವು ಇವತ್ತು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯನ್ನು ಸಜ್ಜುಗೊಳಿಸುತ್ತಿದ್ದೇವೆ ಅದನ್ನು ಖಂಡಿತಾ ಮಾಡುತ್ತೇವೆನ್ನುವ ಆಶ್ವಾಸನೆಯನ್ನು ಸದನಕ್ಕೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಾವು ವಿಧಿಸತಕ್ಕ ತೆರಿಗೆಯನ್ನು ಏತಕ್ಕೆ ಹಾಕುತ್ತೇವೆ ಆ ಉದ್ದೇಶವನ್ನು ನಿರ್ದಿಷ್ಟ ಪಡಿಸಬೇಕೆಂದು ಹೈಕೋರ್ಟ್‌ನಲ್ಲಿ ರಿಟ್ ಇದೆ. ಏಕೆಂದರೆ ಇದರಲ್ಲಿ ಜವಾಬ್ದಾರಿ ಜಾಸ್ತಿಯಾಗುತ್ತದೆ. The onus will be on the BDA. ಇಂತಹ ಸವಲತ್ತುಗಳನ್ನು ಕೊಟ್ಟರೆ ಮಾತ್ರ ವಸೂಲಿ ಮಾಡಬೇಕು. That is the meaning of the clause. ಆ ಉದ್ದೇಶವನ್ನು ಸ್ಪಷ್ಟಪಡಿಸಿದ ಮೇಲೆ ನೀವು ತೆರಿಗೆಯನ್ನು ವಸೂಲಿ ಮಾಡಿ. ಉದ್ದೇಶವನ್ನು ಸ್ಪಷ್ಟಪಡಿಸದೆ ತೆರಿಗೆ ವಸೂಲಿ ಮಾಡಿದರೆ ಬೇಜವಾಬ್ದಾರಿತನ ಆ ಬಾಡಿಗೆ ಬರುತ್ತದೆ. ನಿರ್ದಿಷ್ಟವಾದ ಉದ್ದೇಶವನ್ನು ಸ್ಪಷ್ಟಪಡಿಸಿ ತೆರಿಗೆಯನ್ನು ವಸೂಲಿ ಮಾಡಿದರೆ ಅದರಲ್ಲಿ ನಮ್ಮ ಉದ್ದೇಶ ಬರುತ್ತದೆ. Because it is specified. ಹಿಂದೆ ಕಾನೂನಿನಲ್ಲಿ ಇರಲಿಲ್ಲ. ಈಗ ಕಾನೂನಿನಲ್ಲಿ ಬರುವುದರಿಂದ ಬರೀ ತೆರಿಗೆ ವಸೂಲಿ ಮಾಡತಕ್ಕ ಯಾಂತ್ರಿಕ ಅಧಿಕಾರ ಬರುವುದಿಲ್ಲ. ನಿರ್ದಿಷ್ಟವಾದಂತಹ ಕಾರ್ಯವನ್ನು ನಿಭಾಯಿಸತಕ್ಕ ಜವಾಬ್ದಾರಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಬರುತ್ತದೆ. ಏಕೆಂದರೆ 80 ಸಾವಿರ ಅರ್ಜಿಗಳು ಇವತ್ತಿಗೂ ಕೂಡ ಹಾಗೆಯೇ ಕುಳಿತಿವೆ. ಅಮಾಯಕರು ಅರ್ಜಿ ಹಾಕಿದ್ದಾರೆ ಅವರ ಹಣ ಇದೆ.

On that money the BDA is living. That is not proper. We are conscious of the problem. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ನೌಕರರಿಗೆ ಸಂಬಳ ಕೊಡಲಿಕ್ಕೆ ಅನಾನುಕೂಲ ಪರಿಸ್ಥಿತಿ ಇದೆ. ಅದು ದಿವಾಳಿಯ ಅಂಚಿನಲ್ಲಿದೆ. We have driven the BDA to that extent. I know it. ಮೇಜರ್ ಸರ್ಜರಿಯನ್ನು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಮಾಡುತ್ತಿದ್ದೇವೆ.

5.50 ಪಿ.ಎಂ

ಶ್ರೀ ಆರ್. ವಿ. ದೇಶಪಾಂಡೆ:- ಮುಖ್ಯಮಂತ್ರಿಗಳೇ, ಈ ಬಿಲ್ ಬಂದಾಗ ಏಕೆ ಮಾತನಾಡಿಲ್ಲ ಎಂದರೆ ತಾವು ಹೇಳಿದ ಎಲ್ಲ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ. It has become white elephant. It is bankrupt, It is surviving on the sale of auction sites. ಹಾಗಾಗಿ ಬಾಕಿಯವರಿಗೆ ಕೆಲಸ ಇಲ್ಲ. ಏನು ನಾವು ಟ್ಯಾಕ್ಸ್ ವಿರೋಧ ಮಾಡಿದ್ದೇವೆ ಅದು ಬೇರೆ ಬಿಲ್ ಮುಖ್ಯವಾಗಿ ಇವತ್ತು 80-85 ಸಾವಿರ ಜನರಿಗೆ ನಿವೇಶನ ಸಿಗಬೇಕಾಗಿದೆ. ಇದರ ಬಗ್ಗೆ ಬಿ.ಡಿ.ಎ. ಕ್ರಿಯಾಶೀಲವಾಗಬೇಕಾಗಿದೆ. ಆ ಉದ್ದೇಶಕ್ಕಾಗಿಯೇ ಬಿ.ಡಿ.ಎ. ರಚನೆಯಾಯಿತು. ನಾನು ಈ ಹೌಸಿಂಗ್ ಸೊಸೈಟಿ ವಿಚಾರ ಬಂದಾಗಲೂ ಹೇಳಿದ್ದೆ. ಅದಕ್ಕೆ ತಾವು ನನಗೆ ಉತ್ತರ ಕೊಟ್ಟಿಲ್ಲ. ಇವತ್ತು ಏನಾಗಿದೆ ಎಂದರೆ, ಬಿ.ಡಿ.ಎ.ನಲ್ಲಿ ಏನೂ ಕೆಲಸ ಇಲ್ಲ. ಏಕೆಂದರೆ ಸರ್ಕಾರದಿಂದ ಒಂದು ಆದೇಶ ಹೋಗಿದೆ. ಸಾಕಷ್ಟು ಲ್ಯಾಂಡ್ ಅವರು 4(1)-6(1) ನಲ್ಲಿ ನೋಟಿಫಿಕೇಷನ್ ಮಾಡಿದ್ದಾರೆ. ಆದರೆ ಅವರಿಗೆ ಫರ್ದರ್ ಪ್ರೊಸೀಡಿಂಗ್ಸ್ ತೆಗೆದುಕೊಳ್ಳುವುದಕ್ಕೆ ಬರುತ್ತಿಲ್ಲ. ಏಕೆಂದರೆ ಸರ್ಕಾರದಿಂದ ಒಂದು ಆದೇಶ ಹೋಗಿದೆ. ಏನೆಂದರೆ under land acquisition act ಏನೂ ಲ್ಯಾಂಡ್ ಅಕ್ವೈರ್ ಮಾಡಬೇಡಿ ಎಂದು. Urban ceiling areaದಲ್ಲಿ ಮಾತ್ರ ಎಕ್ಸೆಸ್ ಲ್ಯಾಂಡ್ ಸಿಕ್ಕಿದರೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಅವರಿಗೆ ಲ್ಯಾಂಡ್ ಎಲ್ಲಿ ಸಿಗಬೇಕು? ಲ್ಯಾಂಡ್ ಅಕ್ವಿಸಿಷನ್ ಆಕ್ಟ್‌ನಲ್ಲಿ ಸಾಕಷ್ಟು 4(1), 6(1), ಎಲ್ಲಾ ಪ್ರೊಸೆಸ್ ಮಾಡಿದ್ದಾರೆ. ತಮ್ಮ ಸರ್ಕಾರದಿಂದ ಒಂದು ಆದೇಶವನ್ನು ಎಲ್ಲಾ ವಿತ್‌ಡ್ರಾ ಮಾಡಿ ಗೋಅಹೆಡ್ ಅಂತ ಕೊಡಿ. ಆಗ ಮಾತ್ರ ಅವರು ಕೆಲಸ ಮಾಡಬಹುದು. ಮತ್ತು ಬಡಜನರಿಗೆ ನಿವೇಶನಗಳು ಸಿಗುತ್ತವೆ.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ದೇಶಪಾಂಡೆಯವರು ಏನು ಹೇಳಿದ್ದಾರೆ, ಆ ದಿವಸ ನಾನು ಅವರಿಗೆ ಉತ್ತರ ಕೊಡುವುದಕ್ಕೆ ಮರೆತುಬಿಟ್ಟೆನೋ ಏನೋ ತಾವು ಹೇಳಿದ್ದುದು ಸರಿ. ಏಕೆಂದರೆ 4(1) ನೋಟಿಫಿಕೇಷನ್ ಏನಿದೆ, ಅದನ್ನು ಪ್ರೊಸೀಡ್ ಮಾಡಲಿಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಸುಮಾರು 85 ಸಾವಿರ ಜನರು ಅರ್ಜಿ ಕೊಟ್ಟಿದ್ದಾರೆ. ಅರ್ಜಿಗಳಿಗೆ ಆಹ್ವಾನ ಮಾಡಿದ ಮೇಲೆ ನಾವು ಸೈಟುಗಳನ್ನು ಕೊಡಬೇಕು. ಅನೇಕ ಪೇಪರ್ ಅಲಾಟ್‌ಮೆಂಟ್ಸ್ ಆಗಿವೆ. ನಮ್ಮ ಆದ್ಯತೆ ಈ 85 ಸಾವಿರ ಜನರಿಗೆ ಮೊದಲು ಕೊಡಬೇಕು. ನಾವು ಇಚ್ಛಾನುಸಾರ ಸೈಟುಗಳನ್ನು ಹಂಚುವುದಿಲ್ಲ. ಅವರಿಗೆ ಮೊದಲು ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ನಾವು ಅದಕ್ಕೆ ಬೇಕಾದಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಬಿ.ಡಿ.ಎ. ಯಾವ ಉದ್ದೇಶಕ್ಕಾಗಿ ಸ್ಥಾಪನೆಯಾಗಿದೆ, ಆ ಉದ್ದೇಶದ ಸಾಧನೆಗಾಗಿ ಸರ್ವಪ್ರಯತ್ನವನ್ನು ನಾವು ಮಾಡುತ್ತಿದ್ದೇವೆಂದು ಸದನಕ್ಕೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ ವಿಧಾನ ಪರಿಷತ್ತಿನಿಂದ ತಿರಸ್ಕೃತವಾಗಿರುವ 1993ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 8ವರೆಗೆ

ಉಪಾಧ್ಯಕ್ಷರು:- 'ಖಂಡ 2 ರಿಂದ 8ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 8ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:-

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ಈ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ):- ವಿಧಾನಪರಿಷತ್ತಿನಿಂದ ತಿರಸ್ಕೃತವಾಗಿರುವ 1993ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ ವಿಧಾನಪರಿಷತ್ತಿನಿಂದ ತಿರಸ್ಕೃತವಾಗಿರುವ 1993ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಪುನರ್ ಅಂಗೀಕರಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಅಧ್ಯಕ್ಷರೇ....

ಉಪಾಧ್ಯಕ್ಷರು:- ನಾನು ಈಗ ಬಿಸಿನೆಸ್ ಪ್ರಕಾರ ಹೋಗುತ್ತೇನೆ. ಈಗ ಗಮನ ಸೆಳೆಯುವ ಸೂಚನೆಯನ್ನು ಮುಗಿಸಿಬಿಡೋಣ.

ಗಮನ ಸೆಳೆಯುವ ಸೂಚನೆ

ವಿಷಯ:- ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಮಂಡಳಿ, ನಿಗಮ ಮತ್ತಿತರ ಸರ್ಕಾರದ ಸಂಸ್ಥೆಗಳಲ್ಲಿ ನೇಮಕಾತಿ ಮತ್ತು ಮುಂಬಡ್ತಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಮಾನ್ಯ ಉಪಾಧ್ಯಕ್ಷರೇ, ಸರ್ಕಾರಿ ಕಛೇರಿಗಳಲ್ಲಿ, ಹಾಗೂ ಮಂಡಳಿ ನಿಗಮ ಮತ್ತಿತರ ಸರ್ಕಾರದ ಸಂಸ್ಥೆಗಳಲ್ಲಿ, ನೇಮಕಾತಿ ಹಾಗೂ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ಮೀಸಲಾತಿಯ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.